ಶ್ರೀ ಹೆಚ್. ನಾಗಪ್ಪ :— ಮಾನ್ಯ ಅಧ್ಯಕ್ಷರೆ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಆಫೀಸ್ ಬೇಕೆಂದು ಅವರು ಕೇಳಿದ್ದರು ಅದಕ್ಕೋಸ್ಕರ ಆ ಒಂದು ಕಟ್ಟಡವನ್ನು ಅವರಿಗೆ ಕೊಟ್ಟಿದ್ದೇವೆ. ನಮಗೆ ಬೇಕೆಂದಾಗ ಬಿಟ್ಟು ಕೊಡುವುದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ನಮಗೆ ಅವಶ್ಯಕತೆ ಇದ್ದಾಗ ಅದನ್ನು ನಾವು ಬಿಡಿಸಿಕೊಳ್ಳುತ್ತೇವೆ. ಮತ್ತೆ ಅಲ್ಲಿ ದಿನನಿತ್ಯ ಮಾರ್ಕೆಟ್ ಮಾಡಬೇಕೆಂದು ತಾವು ಕೇಳುತ್ತಿದ್ದೀರಿ. ಅಲ್ಲಿಗೆ ಸಾಮಾನುಗಳು ಬಾರದೇ ಇರುವುದರಿಂದ ವಾರಕ್ಕೊಂದು ಸಲ ಮಾತ್ರ ನಾವು ವ್ಯವಹಾರ ವ್ಯಾಪಾರ ಮಾಡುತ್ತಿದ್ದೇವೆ. ಸಾಮಾನುಗಳು ಬಂದರೆ ಪ್ರತಿದಿನ ವ್ಯಾಪಾರ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ನಾವೇನು ನೋಟಿಫೈಡ್ ಕಮಾಡಿಟಿಗಳನ್ನು ಮಾಡಿದ್ದೇವೆ ಅವುಗಳೆಲ್ಲಾ ಬಂದರೆ ಪ್ರತಿದಿನ ವ್ಯಾಪಾರ ವ್ಯವಹಾರ ಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಯು.ಆರ್. ಸಭಾಪತಿ :— ಬ್ಯಾಂಕು, ಪೋಸ್ಟ್ ಆಫೀಸ್ ಇದ್ದ ಕಟ್ಟಡ ಬಿದ್ದು ಹೋಗಿದೆ. ಬ್ಯಾಂಕು ಪೋಸ್ಟ್ ಆಫೀಸ್ ಅಲ್ಲಿ ಇಲ್ಲದಿದ್ದರೆ ದಿನನಿತ್ಯದ ಮಾರುಕಟ್ಟೆ ನಡೆಯುವುದು ಹೇಗೆ? ಬೇಕಾದಷ್ಟು ಹಣವನ್ನು ಖರ್ಚು ಮಾಡಿ ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿ ಗೋಡೌನು ಮಾಡಿ ಅಲ್ಲಿ ಸರಿಯಾದ ರೀತಿಯಲ್ಲಿ ಜನರಿಗೆ, ರೈತರಿಗೆ, ಗ್ರಾಹಕರಿಗೆ ಪ್ರಯೋಜನ ಸಿಗದಿದ್ದರೆ ನೀವು ಮಾಡಿಯೂ ಪ್ರಯೋಜನ ಇಲ್ಲವಾಗಿದೆ. ಬಿದ್ದುಹೋದ ಕಟ್ಟಡವನ್ನು ನೀವು ಏಕೆ ರಿಪೇರಿ ಮಾಡಲಿಲ್ಲ ಎಂಬುದು ಗೊತ್ತಾಗುತ್ತಿಲ್ಲ. ಬ್ಯಾಂಕು ಮತ್ತು ಪೋಸ್ಟ್ ಆಫೀಸು ತೆರೆಯುವ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಹೆಚ್. ನಾಗಪ್ಪ :— ಬ್ಯಾಂಕು ಮತ್ತು ಪೋಸ್ಟ್ ಆಫೀಸು ಕಟ್ಟಡ ಬಿದ್ದುಹೋಗಿರುವ ಬಗ್ಗೆ ಮಾಹಿತಿ ಇಲ್ಲ. ತಾವು ಈಗ ಹೇಳಿದ್ದೀರಿ; ಇನ್ನು ಮೂರ್ನಾಲ್ಕು ಗೋಡೋನುಗಳು ಬಾಕಿ ಇವೆ. ಅವರಿಗೆ ಬೇಕೆಂದರೆ ಅವಶ್ಯಕತೆಯಿದ್ದರೆ ಅದನ್ನು ರಿಪೇರಿ ಮಾಡುವ ಕೆಲಸವನ್ನು ಶುರು ಮಾಡುವುದಕ್ಕೆ ಏರ್ಪಾಟು ಮಾಡುತ್ತೇನೆ.

ಮಂಗಳೂರು ತಾಲ್ಲೂಕಿನ ವಿಭಜನೆ.

329(2185) ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮಂಗಳೂರು ತಾಲ್ಲೂಕನ್ನು ವಿಭಜಿಸಿ ಎರಡು ತಾಲ್ಲೂಕುಗಳನ್ನಾಗಿ ಮಾಡುವ ಉದ್ದೇಶ ಸರಕಾರಕ್ಕಿದೆಯೇ;

2. ಹಾಗಿದ್ದಲ್ಲಿ, ಈ ಬಗ್ಗೆ ಸರಕಾರ ಎಂದು ಕ್ರಮ ತೆಗೆದುಕೊಳ್ಳುವುದು

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

1. ಹೌದು.

2. ಜಿಲ್ಲಾಧಿಕಾರಿಗಳು, ದಕ್ಷಿಣಕನ್ನಡ ಜಿಲ್ಲೆ ಮಂಗಳೂರು ಇವರಿಂದ ಪ್ರಸ್ತಾವನೆ ನಿರೀಕ್ಷಿಸಲಾಗಿದ್ದು ಅದು ಬಂದ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎನ್. ಯೋಗೀಶ್ ಭಟ್:— ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೆಯ ಪ್ರಶ್ನೆಗೆ ಮಂಗಳೂರು ತಾಲ್ಲೂಕನ್ನು ವಿಭಜಿಸಿ ಎರಡು ತಾಲ್ಲೂಕುಗಳನ್ನು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯ ಅಂದರೆ ಸರ್ಕಾರ ಹೌದು ಎಂದು ಹೇಳಿದ್ದಾರೆ; ಅದಕ್ಕೆ ಧನ್ಯವಾದಗಳು. ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಎಂದು ಕ್ರಮ ಕೈಗೊಳ್ಳುವುದು? ಇದರ ಬಗ್ಗೆ ಜಿಲ್ಲಾಧಿಕಾರಿಗಳ ಪ್ರಸ್ತಾವನೆ ತಮ್ಮ ಗಮನಕ್ಕೆ ಬಂದು ತಮ್ಮ ಇಲಾಖೆಯ ಮಟ್ಟದಲ್ಲಿದೆ. ಅದೇರೀತಿ ಅನೇಕ ರಿವ್ಯೂ ಮೀಟಿಂಗ್‌ಗಳಲ್ಲಿ ಶಾಸಕರ ಕಡೆಯಿಂದ ತಮಗೆ ಒಂದು ಮನವಿ ಕೂಡ ಬಂದಿದೆ. ಅದಕ್ಕೆ ಬೇಕಾಗುವಂತಹ ಪೂರಕ ಮಾಹಿತಿಗಳು ತಮ್ಮ ಗಮನದಲ್ಲಿದೆ. ಇದನ್ನು ಅನೌನ್ಸ್ ಮಾಡಬೇಕೆಂದು ಹೇಳುವಂತಹ ಒತ್ತಾಯವನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ಮಾಡುತ್ತೇನೆ. ಮಂಗಳೂರನ್ನು ಎರಡು ತಾಲ್ಲೂಕುಗಳಾಗಿ ವಿಭಜಿಸಿದಾಗ ಮಾತ್ರ ಮಂಗಳೂರು ಜಿಲ್ಲೆಯ ಜನತೆಗೆ ಅದರಲ್ಲೂ ವಿಶೇಷವಾಗಿ ಈಗಿರುವಂತಹ ಮಂಗಳೂರು ತಾಲ್ಲೂಕಿನ ಜನತೆಗೆ ಒಳ್ಳೆಯ ಸೇವೆಯನ್ನು ಕೊಡಲಿಕ್ಕೆ ಸಾಧ್ಯವಾಗಬಹುದು. ಎರಡನೆಯದು, ಮೂಡಬಿದಿರೆ ಮತ್ತು ಮಂಗಳೂರು ಕೇಂದ್ರಗಳನ್ನು ಎರಡು ತಾಲ್ಲೂಕುಗಳನ್ನಾಗಿ ವಿಭಜಿಸಿದಲ್ಲಿ ನಿಜವಾದ ಅರ್ಥದಲ್ಲಿ ಜನಸಾಮಾನ್ಯರಿಗೆ ಸರ್ಕಾರಿ ಸೇವೆಯನ್ನು ಕೊಡಲಿಕ್ಕೆ ಸಾಧ್ಯವಾಗಬಹುದು ಎನ್ನುವುದು ನಮ್ಮ ಅನಿಸಿಕೆ. ಈ ಬಗ್ಗೆ ತಾವು ಒಂದು ದಿನಾಂಕವನ್ನು ಕೂಡ ಘೋಷಣೆ ಮಾಡಬೇಕು. ಎಂಟನೇ ತಾರೀಖು ಇನ್ನೂರನೆ ವರ್ಷದ ಜಿಲ್ಲಾಡಳಿತ ದಿವಸ ಬರುವುದರಿಂದ ತಾವು ಆ ಸಂದರ್ಭದಲ್ಲಾದರೂ ಇದನ್ನು ಅನೌನ್ಸ್ ಮಾಡಿದರೆ ಬಹಳ ಉಚಿತವಾಗುತ್ತದೆ ಎಂದು ನಮ್ಮ ಅನಿಸಿಕೆಯಾಗಿದೆ.

ಶ್ರೀ ಬಿ. ಸೋಮಶೇಖರ್:— ಮಾನ್ಯ ಅಧ್ಯಕ್ಷರೆ, ಮಂಗಳೂರು ಮತ್ತು ಮೂಡುಬಿದಿರೆಯಲ್ಲಿ ಹೆಚ್ಚು ತಾಲ್ಲೂಕುಗಳನ್ನು ಮಾಡಬೇಕೆಂಬ ಬೇಡಿಕೆ ಬಹಳ ದಿವಸಗಳಿಂದ ಇದೆ. ಸರ್ಕಾರ ಇದರ ಅವಶ್ಯಕತೆ ಇದೆಯೆಂದೂ ಸಹ ಮನಗಂಡಿದೆ. ಆದರೆ ಇದಕ್ಕೆ ವಿಧಿವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಆದರೂ ನಾವು ಇದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ ಎಂದು ಮಾತ್ರ ಹೇಳುತ್ತೇನೆ.

ಶ್ರೀ ಕುಂಭೆ ಸುಂದರರಾವ್:— ಸನ್ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ ಎಂದರೆ ಮಂಗಳೂರು ತಾಲ್ಲೂಕಿನಲ್ಲಿ ಪೂರ್ತಿಯಾಗಿ ಮೂರು ವಿಧಾನಸಭಾ ಕ್ಷೇತ್ರಗಳು ಎರಡು ಅರ್ಧ ಅರ್ಧ ವಿಧಾನಸಭಾ ಕ್ಷೇತ್ರಗಳು ಎಂದು ಒಟ್ಟು 5 ವಿಧಾನಸಭಾ ಕ್ಷೇತ್ರಗಳು ಬರುತ್ತವೆ. ಗ್ರಾಮಾಂತರವನ್ನು ನೀವು ವಿಭಜಿಸದೇ ಇದ್ದರೆ ಕಚೇರಿಗಳಿಗೆ ಹೋಗಿ ಏನೂ ಕೆಲಸ ಮಾಡಿಸುವುದಕ್ಕೆ ಆಗುವುದಿಲ್ಲ. ಇದ್ದ ತಹಶೀಲ್ದಾರರು ಅಸೌಖ್ಯ ಎಂದು ರಜೆಹಾಕಿ ಹೋದಾಗ, ಅವರ ಚಾರ್ಜಿನಲ್ಲಿ ಯಾರು ಇರುತ್ತಾರೋ ಅವರಿಂದ ಕೆಲಸ ಮಾಡುವುದಕ್ಕೆ ಆಗದೇ ಇದ್ದಾಗ ನಾವು ಶಾಸಕರು ಹೋದರೂ ಹಾಗೆಯೇ ಹಿಂದೆ ಬರುವ ಪರಿಸ್ಥಿತಿ ಇದೆ. ಇನ್ನು ಉಳಿದವರ ಪಾಡು ಬೇಡ. ಆದ್ದರಿಂದ ನೀವು ವಿಭಜನೆ ಮಾಡಿ

ತಾಲ್ಲೂಕನ್ನು ಬೇರೆ ಮಾಡದೇ ಇದ್ದರೂ ಸಹ ಇಬ್ಬರು ತಹಸೀಲ್ದಾರರನ್ನು ನೇಮಕ ಮಾಡಿದರೆ ಒಳ್ಳೆಯದು. ಗ್ರಾಮಾಂತರಕ್ಕೆ ಬೇರೆ, ನಗರ ಭಾಗಕ್ಕೆ ಬೇರೆ ಎಂದು ಮಾಡಿದರೆ ಎಷ್ಟೋ ಅನುಕೂಲವಾಗುತ್ತದೆ. ದಯವಿಟ್ಟು ಇದನ್ನು ತಾವು ಪರಿಶೀಲಿಸಬೇಕು. ಇನ್ನೂರನೇ ವರ್ಷದ ಉತ್ಸವದ ಹೊತ್ತಿಗೆ ಈ ವಿಭಜನೆ ವ್ಯವಸ್ಥೆ ಮಾಡಿದರೆ ಅದು ಪ್ರತ್ಯೇಕವಾದ ಅನುಕೂಲ ವ್ಯವಸ್ಥೆಯಾಗುತ್ತದೆ. ಇದರಿಂದ ಜನರನ್ನು ಸಂತೋಷಪಡಿಸಿದ ಹಾಗೆ ಆಗುತ್ತದೆ. ಎಂಟನೇ ತಾರೀಖಿಗೆ ಜಿಲ್ಲಾಡಳಿತ ದಿನದ 200ನೇ ವರ್ಷದ ಉದ್ಘಾಟನೆ ಇದೆ.

ಶ್ರೀ ಕೆ. ಜಯರಾಮಶೆಟ್ಟಿ :— ಸನ್ಮಾನ್ಯ ಅಧ್ಯಕ್ಷರೆ, ಇದಕ್ಕೆ ಪೂರಕವಾಗಿ ನಾನು ಹೇಳುತ್ತೇನೆ. ಕಳೆದ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಇನ್ನು ನಾವು ತಾಲ್ಲೂಕುಗಳನ್ನು ವಿಭಜನೆ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಈಗ ಮಾನ್ಯ ಮಂತ್ರಿಗಳು ಇದನ್ನು ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಈಗಾಗಲೇ ಜಿಲ್ಲಾಧಿಕಾರಿಗಳು ಎಲ್ಲ ಮಾಹಿತಿಯನ್ನು ಕಳಿಸಿಕೊಟ್ಟಿದ್ದಾರೆ. ಈಗ ಅಲ್ಲಿದ್ದ ತಹಶೀಲ್ದಾರರು ಕಳೆದ ಐದಾರು ತಿಂಗಳುಗಳಿಂದ ಅನಾರೋಗ್ಯದಿಂದಾಗಿ ಕಚೇರಿಗೆ ಹಾಜರಾಗುತ್ತಿಲ್ಲ. ಈಗಾಗಲೇ ಬಹಳಷ್ಟು ಕಡತಗಳು ಅಲ್ಲಿ ಬಾಕಿ ಇವೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಶೀಘ್ರ ನಿರ್ಧಾರ ತೆಗೆದುಕೊಂಡು ನಿಮ್ಮ ನಿಯಮಾವಳಿ ಅಥವಾ ಕೆಲವು ಕ್ರಮಗಳಿಗೋಸ್ಕರ ಸಮಯ ಹೋಗುವುದಾಗಿ ಅಷ್ಟರತನಕ ಒಬ್ಬ ಹೆಚ್ಚುವರಿ ತಹಸೀಲ್ದಾರರನ್ನು ಕೊಡಿ ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಸನ್ಮಾನ್ಯ ಅಧ್ಯಕ್ಷರೆ, ನನಗೆ ಈ ಸರ್ಕಾರದ ನಿಲುವು ಅರ್ಥವಾಗಬೇಕಾಗಿದೆ. ಒಂದುಕಡೆ ಸರ್ಕಾರಿ ನೌಕರರ ಸಂಖ್ಯೆಯನ್ನು ಕಡಿಮೆ ಮಾಡುತ್ತೇವೆ ಎಂದು ಹೇಳುತ್ತೀರಿ. ಇನ್ನೊಂದು ಕಡೆ ಒಂದೇ ಊರಿನಲ್ಲಿ ಎರಡೆರಡು ಎಸ್ಟಾಬ್ಲಿಷ್‌ಮೆಂಟ್ಸ್ ಮಾಡಿದರೆ, ತಾಲ್ಲೂಕು ವಿಭಜನೆ ಮಾಡಿದರೆ ಅದು ಒಂದೇ ಆಗುವುದಿಲ್ಲ. ಬಿ.ಡಿ.ಓ. ಕಚೇರಿ ಆಗಬೇಕಾಗುತ್ತದೆ, ಟ್ರೆಜರಿ ಆಫೀಸ್ ಆಗಬೇಕಾಗುತ್ತದೆ. ಎಲ್ಲಾ ಕಚೇರಿಗಳನ್ನು ಒಂದೇ ಊರಿನಲ್ಲಿ ಎರಡು-ಎರಡು ಮಾಡುವುದು ಸಮಯೋಚಿತವಾದ ತೀರ್ಮಾನವೇನು? ಹೀಗೆ ವಿಭಜನೆ ಮಾಡುತ್ತಾ ಹೋದರೆ, ನೀವು ಎಲ್ಲಾ ಕಡೆಗೂ ಈ ವ್ಯವಸ್ಥೆಯನ್ನೇ ತರಬೇಕಾಗುತ್ತದೆ. ಸನ್ಮಾನ್ಯ ಸಚಿವರು ಅಸಿಸ್ಟೆಂಟ್ ಕಮೀಷನರ್‌ನ್ನು ಹಾಕುತ್ತೇನೆ ಎಂದು ಹೇಳಿದ್ದಾರೆ. ಈಗ ತಾಲ್ಲೂಕನ್ನು ಅರ್ಬನ್ ಮತ್ತು ರೂರಲ್ ಎಂದು ಮಾಡಿದರೆ ಅದೇ ಜನ ಮಂಗಳೂರಿಗೆ ಬರಬೇಕಾಗುತ್ತದೆ. ಒಂದೊಂದು ವ್ಯವಸ್ಥೆಗೆ ಎರಡೆರಡು ಕಚೇರಿ ಮಾಡುವುದು ಸರ್ಕಾರದ ನಿಲುವೇ ಎಂದು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಏಕೆಂದರೆ ಕೆಲವು ಹುದ್ದೆಗಳನ್ನು ಕಡಿತ ಮಾಡುವಾಗ ಇನ್ನೊಂದಷ್ಟು ಹೊಸ ಹುದ್ದೆಗಳನ್ನು ಸೃಷ್ಟಿಸಿ, ಕಚೇರಿಗಳನ್ನು ಆರಂಭ ಮಾಡುವುದು ಸರಿಯೇ ಎಂದು ನಾನು ಕೇಳುತ್ತೇನೆ.

ಅಧ್ಯಕ್ಷರು :— ಮಂತ್ರಿಗಳು ಹೇಳಲಿ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಸಭಾಧ್ಯಕ್ಷರೆ, ಕೆಲವು ಸಾರಿ ಬಹಳ ಹಿಂದೆ ತಾಲ್ಲೂಕುಗಳ ವಿಂಗಡಣೆ ಆಯಿತು. ಕೆಲವು ಕಡೆ ಕೆಲಸದ ಒತ್ತಡ ಜಾಸ್ತಿಯಾಗಿದೆ, ಭೌಗೋಳಿಕ ವಿಸ್ತೀರ್ಣ ಜಾಸ್ತಿಯಾಗಿದೆ. ಅಂತಹ ಕಡೆ ಅತ್ಯವಶ್ಯಕವಾದ ಆಡಳಿತಾತ್ಮಕ ದೃಷ್ಟಿಯಿಂದ, ಜನರ ಸೇವಾದೃಷ್ಟಿಯಿಂದ ಕೆಲವು ಸಾರಿ ಮಾಡಬೇಕಾದ ಸಂದರ್ಭ ಬಂದಾಗ ಯೋಚನೆ ಮಾಡಬೇಕಾಗುತ್ತದೆ. ಸಂಪೂರ್ಣವಾಗಿ ತೆರೆ ಮುಚ್ಚಿದ್ದೇವೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ ಡೂಪ್ಲಿಕೇಷನ್ ಆಗಬಾರದು. ಸಾರ್ವಜನಿಕರಿಗೆ ಒಳ್ಳೆಯ ಆಡಳಿತ ಹತ್ತಿರದಲ್ಲಿ ಸಿಗಬೇಕು. ಈ ಎಲ್ಲಾ ದೃಷ್ಟಿಯಿಂದ ಅವಶ್ಯಕತೆ ಬಿದ್ದಾಗ ಯೋಚನೆ ಮಾಡಬೇಕಾಗುತ್ತದೆ. ಒಂದು ಸಲಹೆ ಏನು ಅವರು ಕೊಟ್ಟಿದ್ದಾರೆ, ಹೊಸದಾಗಿ ತಾಲ್ಲೂಕು ರಚನೆ ಮಾಡುವುದಕ್ಕೆ ಆಗದಿದ್ದರೂ ಕೊನೆಯಪಕ್ಷ ಒಬ್ಬ ಹೆಚ್ಚುವರಿ ತಹಸೀಲ್ದಾರರನ್ನು ಕೊಡಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಸಂಪೂರ್ಣವಾದಂಥ ಸಹಮತ ಇದೆ. ಆದಷ್ಟು ಬೇಗ ಇದರ ತೀರ್ಮಾನ ಮಾಡುತ್ತೇನೆ.

ಸಂತೆಮಾರನಹಳ್ಳಿ ವ್ಯಾಪ್ತಿಯಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ ಮಾರ್ಗಗಳು.

331(2175) ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂತೇಮಾರನಹಳ್ಳಿ ವ್ಯಾಪ್ತಿಗೆ ಒಳಪಡುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ಮಾರ್ಗಗಳು ಯಾವುವು; ಈ ಮಾರ್ಗಗಳಲ್ಲಿ ಓಡಾಡಲು ಮಂಜೂರಾತಿ ಪಡೆದಿರುವ ಬಸ್ಸುಗಳ ಸಂಖ್ಯೆ ಎಷ್ಟು? ಹಾಲಿ ಎಷ್ಟು ಬಸ್ಸುಗಳು ಓಡಾಡುತ್ತಿವೆ; ಉಳಿಕೆ ಬಸ್ಸುಗಳನ್ನು ಯಾವ ಕಾರಣಕ್ಕಾಗಿ ಬಿಡಲಾಗಿಲ್ಲ;

ಆ) ಈ ಕ್ಷೇತ್ರದ ಕೇಂದ್ರ ಸ್ಥಾನವಾದ ಸಂತೇಮಾರನಹಳ್ಳಿಗೆ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ, ಅದನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಸಂಸ್ಥೆಯ ಸಾರಿಗೆಗಳು 8 ಮಾರ್ಗಗಳಲ್ಲಿ ಕಾರ್ಯಾಚರಿಸುತ್ತಿವೆ. ವಿವರಗಳನ್ನು "ಅನುಬಂಧ-ಅ"ನಲ್ಲಿ ನೀಡಲಾಗಿದೆ. ಸದರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಮಂಜೂರಾತಿ ಪಡೆದ 18 ಬಸ್ಸುಗಳು ಆಚರಣೆಯಲ್ಲಿದ್ದು 18 ಬಸ್ಸುಗಳು ಕಾರ್ಯಾಚರಣೆ ಮಾಡುತ್ತಿವೆ. ಇದರಿಂದಾಗಿ ಉಳಿಕೆ ಬಸ್ಸುಗಳ ಪ್ರಸ್ತಾಪವು ಉದ್ಭವಿಸುವುದಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.